ಹೈಕೋರ್ಟಿನಲ್ಲಿ ದಾಖಲಾದ ಪ್ರಕರಣಗಳು

2872:(3858)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಕಾನೂನು ಸಂಸದೀಯ ವ್ಯವಹಾರ ಶಾಸನ ರಚನೆ ವಾರ್ತಾ ಮತ್ತು ಪ್ರಚಾರ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಹೈಕೋರ್ಟಿನಲ್ಲಿ ದಿನಾಂಕ 1-1-98ರಿಂದ 30-9-98ರವರೆಗೆ ದಾಖಲಾದ ದಾವೆಗಳ ಒಟ್ಟು ಸಂಖ್ಯೆ ಎಷ್ಟು? ಚಾಲ್ತಿಯಲ್ಲಿರುವ ಒಟ್ಟು ಪ್ರಕರಣಗಳ ಸಂಖ್ಯೆ ಎಷ್ಟು?

ಆ) ಪ್ರಕರಣಗಳ ಶೀಘ್ರ ವಿಲೇವಾರಿಗಾಗಿ ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಸಚಿವರು):

ಅ) ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ದಿನಾಂಕ 1-1-98ರಿಂದ 30-9-98ರವರೆಗೆ 53,328 ಪ್ರಕರಣಗಳು ದಾಖಲಾಗಿದ್ದು ದಿನಾಂಕ 1-10-98ರಲ್ಲಿದ್ದಂತೆ 94,972 ಪ್ರಕರಣಗಳು ಬಾಕಿ ಇರುತ್ತವೆ.

ಆ) ಉಚ್ಚನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಶೀಘ್ರ ವಿಲೇವಾರಿ ಮಾಡಲು ರಾಜ್ಯ ಸರ್ಕಾರವು ಯಾವುದೇ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವದಿಲ್ಲ.

ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ

2873:(3857)

ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಅಂಕೋಲಾ ರೈಲು ಮಾರ್ಗದ ಸಲುವಾಗಿ ಸರ್ವೆ ನಡೆಸಲಾಗುತ್ತಿದೆಯೇ?

ಆ) ಈ ಬಗ್ಗೆ ಭೂ ಸ್ವಾಧೀನ ಪಡಿಸಿಕೊಳ್ಳುವ ಕೆಲಸ ಪ್ರಾರಂಭವಾಗಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಎಷ್ಟು ಭೂಮಿಯನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗುವುದು?

ಈ) ಕೇಂದ್ರ ಸರ್ಕಾರ ಈ ರೈಲು ಮಾರ್ಗದ ಸರ್ವೆಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ಈ ಯೋಜನೆ ಎಂದು ಕಾರ್ಯಗತವಾಗವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಸರ್ವೆ ಕೆಲಸವು ಮುಗಿದಿದೆ.

ಆ) ಇಲ್ಲ.

ಇ) ಸುಮಾರು 4125 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬಹುದೆಂದು ಅಂದಾಜು ಮಾಡಲಾಗಿದೆ.

ಈ) ಕೇಂದ್ರ ಸರ್ಕಾರವು ಈ ಕೆಳಗಿನಂತೆ ಹಣವನ್ನು ಬಿಡುಗಡೆ ಮಾಡಿದೆ:-

1) 1996-97 - 1.00 ಲಕ್ಷ ರೂ.

2) 1997-98 - 100.00 ಲಕ್ಷ ರೂ.

3) 1998-99 - 10.00 ಕೋಟಿ ರೂ.ಗಳು.

ಈ ಯೋಜನೆ ಕಾರ್ಯಗತವಾಗುವ ಬಗ್ಗೆ ಕೇಂದ್ರ ಸರ್ಕಾರವು ನಿರ್ಧರಿಸಬೇಕಾದ ವಿಷಯವಾಗಿರುತ್ತದೆ.

ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆ ಕಟ್ಟಡಗಳ ನಿರ್ವಹಣೆ.

2874:(3859)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿಯ 'ಕಿಮ್ಸ್' ಆಸ್ಪತ್ರೆ ಕಟ್ಟಡಗಳ ನಿರ್ವಹಣೆಗಾಗಿ ಕಳೆದ ಮೂರು ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆಯಿಂದ ಮಾಡಿದ ವೆಚ್ಚ ಎಷ್ಟು?

ಆ) ಆ ಬಗ್ಗೆ ಕೈಗೊಂಡ ಕಾಮಗಾರಿಗಳಾವುವು?

ಇ) ಕೈಗೊಳ್ಳಬೇಕಾಗಿರುವ ಕಾಮಗಾರಿಗಳು ಯಾವುವು; ಅದಕ್ಕಾಗಿ ನಿಗದಿಪಡಿಸಲಾದ ಹಣ ಎಷ್ಟು?